# ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ ನಿಯಮಿತ, ವಿಜಯಪುರ

ನಂ.ಆಡಳಿತ/ಸಿಬ್ಬಂದಿ/ನೇಮಕಾತಿ/916/2026
ವಿಜಯಪುರ ದಿನಾಂಕ: 26-08-2026

## -: <u>ನೇಮಕಾತಿ ಅಧಿಸೂಚನೆ</u> :-

ಮಾನ್ಯ ನಿಬಂಧಕರು, ಸಹಕಾರ ಸಂಘಗಳು, ಬೆಂಗಳೂರು ಇವರ ಆದೇಶ ಸಂಖ್ಯೆ **ಆರ್‌ಸಿಎಸ್/ಯುಬಿಸಿ-7/03/ಯುಸಿಎಸ್/2026-27** ದಿನಾಂಕ **14-07-2026** ರಡಿಯಲ್ಲಿ ಹೊರಡಿಸಿದ ಆದೇಶದ ಮೇರೆಗೆ ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ್ ನಿಯಮಿತ, ವಿಜಯಪುರ ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೆವುಳ್ಳ ಅಭ್ಯರ್ಥಿಗಳು ಅನ್‌ಲೈನ್ ಮುಖಾಂತರ ದಿನಾಂಕ **26-08-2026** ರಿಂದ ದಿನಾಂಕ **15-09-2026** ರವರೆಗೆ ಅರ್ಜಿಗಳು ಅನ್‌ಲೈನ್ ನಲ್ಲಿ ಲಭ್ಯವಿರುತ್ತವೆ. ಅರ್ಜಿಗಳನ್ನು ಆನ್‌ಲೈನ್ ನಲ್ಲಿ ದಿನಾಂಕ **15-09-2026** ರಂದು ಸಾಯಂಕಾಲ **5-30** ಘಂಟೆ ಒಳಗಾಗಿ ಆನ್‌ಲೈನ್‌ನ ಮುಖಾಂತರ ಮಾತ್ರ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

Website Link : **<u>https://ssbankvijaypur.com/</u>** ಇದರಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ನೇಮಕಾತಿ ಮಾಡಲು ಉದ್ದೇಶಿಸಿದ ವಿವಿಧ ಹುದ್ದೆಗಳನ್ನು ಸರಕಾರದ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗಿಕರಿಸಿ ಮೀಸಲಿರಿಸಲಾಗಿದೆ.

### 1) <u>ಹುದ್ದೆಗಳ ವಿವರ:-</u>

| ಅ. ನಂ. | ಹುದ್ದೆಗಳ ಪದನಾಮ | ಒಟ್ಟು ಹುದ್ದೆ |
|---|---|---|
| 1) | ಕಿರಿಯ ವ್ಯವಸ್ಥಾಪಕರು | 06 |
| 2) | ಹಿರಿಯ ಸಹಾಯಕರು | 10 |
| 3) | ಕಿರಿಯ ಸಹಾಯಕರು | 15 |
| 4) | ನಾಯಕ/ಅಟೆಂಡರ | 03 |
| 5) | ವಾಹನ ಚಾಲಕ | 01 |
| 6) | ಸಿಪಾಯಿ | 19 |
| 7) | ರಾತ್ರಿ ಕಾವಲುಗಾರ | 06 |
| | ಒಟ್ಟು | 60 |

### 2). <u>ವೇತನ ಶ್ರೇಣಿ ರೂ:</u>

1) ಕಿರಿಯ ವ್ಯವಸ್ಥಾಪಕರು : ರೂ.22800-600-24600-700-28800-800-33600-900- 39000-1050-43200.

2) ಹಿರಿಯ ಸಹಾಯಕರು : ರೂ.21600-600-24600-700-28800-800-33600-900-39000-1050-40050

3) ಕಿರಿಯ ಸಹಾಯಕರು : ರೂ.20000-500-21000-600-24600-700-28800-800- 33600- 900-36300.

4) ನಾಯಕ/ಅಟೆಂಡರ : ರೂ.14550-350-15600-400-17200-450-19000-500-21000-600-24600-700-26700.

5) ವಾಹನ ಚಾಲಕ : ರೂ.14550-350-15600-400-17200-4519000-500-21000- 600- 24600-700-26700.

6) ಸಿಪಾಯಿ : ರೂ.14550-350-15600-400-17200-450-19000-500-21000-600- 24600-700-26700.

7) ರಾತ್ರಿ ಕಾವಲುಗಾರ : ರೂ.14550-350-15600-400-17200-450-19000-500-21000- 600- 24600-700-26700.

ಮತ್ತು ನಿಯಮಾನುಸಾರ ತುಟ್ಟಿಭತ್ಯ ಹಾಗೂ ಇತರೆ ಭತ್ಯಗಳು.

3.ವಿದ್ಯಾರ್ಹತೆ :

1. **ಕಿರಿಯ ವ್ಯವಸ್ಥಾಪಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ್ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಹಣಕಾಸು ಸಂಸ್ಥೆಯಲ್ಲಿ (ಬ್ಯಾಂಕಿಂಗ್ ವಿಭಾಗದಲ್ಲಿ) ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಹುದ್ದೆಗಳಿಗೆ ಅನುಗುಣವಾಗಿ ನೇಮಕಾತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಈ ಕೆಳಗಿನಂತೆ ಕನಿಷ್ಠ / ಸರಾಸರಿ ಅಂಕ ಪಡೆದಿರಬೇಕು.

   (ಅ) ಸಾಮಾನ್ಯ / ಇತರೇ ವರ್ಗಗಳು ಕನಿಷ್ಠ ಅಂಕ ಶೇ.60.

   (ಬ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳು ಹಾಗೂ ಮಾಜಿ ಸೈನಿಕರು ಕನಿಷ್ಠ ಅಂಕ ಶೇ.45 ಪಡೆದಿರಬೇಕು.

2. **ಹಿರಿಯ ಸಹಾಯಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ್ ಪರಿಜ್ಞಾನ ಹೊಂದಿರಬೇಕು. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಹುದ್ದೆಗಳಿಗೆ ಅನುಗುಣವಾಗಿ ನೇಮಕಾತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಈ ಕೆಳಗಿನಂತೆ ಕನಿಷ್ಠ / ಸರಾಸರಿ ಅಂಕ ಪಡೆದಿರಬೇಕು.

   (ಅ) ಸಾಮಾನ್ಯ / ಇತರೇ ವರ್ಗಗಳು ಕನಿಷ್ಠ ಅಂಕ ಶೇ.60.

   (ಬ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳು ಹಾಗೂ ಮಾಜಿ ಸೈನಿಕರು ಕನಿಷ್ಠ ಅಂಕ ಶೇ.45 ಪಡೆದಿರಬೇಕು.

3. **ಕಿರಿಯ ಸಹಾಯಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಅಂಗಿಕೃತ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ್ ಪರಿಜ್ಞಾನ ಹೊಂದಿರಬೇಕು. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಹುದ್ದೆಗಳಿಗೆ ಅನುಗುಣವಾಗಿ ನೇಮಕಾತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಈ ಕೆಳಗಿನಂತೆ ಕನಿಷ್ಠ / ಸರಾಸರಿ ಅಂಕ ಪಡೆದಿರಬೇಕು.

   (ಅ) ಸಾಮಾನ್ಯ / ಇತರೇ ವರ್ಗಗಳು ಕನಿಷ್ಠ ಅಂಕ ಶೇ.60.

   (ಬ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳು ಹಾಗೂ ಮಾಜಿ ಸೈನಿಕರು ಕನಿಷ್ಠ ಅಂಕ ಶೇ.45 ಪಡೆದಿರಬೇಕು.

4. **ನಾಯಕ/ಅಟೆಂಡರ** : ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕರ್ನಾಟಕ ಬೋರ್ಡ್/ಸಿ.ಬಿ.ಎಸ್.ಸಿ. ಬೊರ್ಡ್‌ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು.

5. **ವಾಹನ ಚಾಲಕ** : ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕರ್ನಾಟಕ ಬೋರ್ಡ್/ಸಿ.ಬಿ.ಎಸ್.ಸಿ. ಬೊರ್ಡ್‌ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. ಅಭ್ಯರ್ಥಿಗಳು ವಾಹನ ಚಾಲನೆಯ ಚಾಲ್ತಿ (ಎಲ್‌ಎಮ್‌ವ್ಹಿ) ಲೈಸನ್ಸ ಹೊಂದಿರತಕ್ಕದ್ದು.

ಸಹಕಾರಿ ಬ್ಯಾಂಕ್ ಆಡಳಿತ ಕಚೇರಿ

6. **ಸಿಪಾಯಿ** : ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕರ್ನಾಟಕ ಬೋರ್ಡ್/ಸಿ.ಬಿ.ಎಸ್.ಸಿ. ಬೋರ್ಡ್‌ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು.

7. **ರಾತ್ರಿಕಾವಲುಗಾರ**: ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕರ್ನಾಟಕ ಬೋರ್ಡ್/ಸಿ.ಬಿ.ಎಸ್.ಸಿ. ಬೋರ್ಡ್‌ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು.

**4.ವಯೋಮಿತಿ :**

ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು. ಗರಿಷ್ಠ ವಯೋಮಿತಿ ಈ ಕೆಳಗಿನಂತೆ ಇದೆ.

1. ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷಗಳು ಮೀರಿರಬಾರದು.
2. ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 38 ವರ್ಷಗಳು ಮೀರಿರಬಾರದು.
3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಪ್ರವರ್ಗ-1 ಅಭ್ಯರ್ಥಿಗಳಿಗೆ 40 ವರ್ಷಗಳು ಮೀರಿರಬಾರದು.
4. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರಬೇಕು ಮತ್ತು ಅವರು ಸಲ್ಲಿಸಿದ ಸೇವೆಯ ಜೊತೆಗೆ 3 ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರಿರುತ್ತಾರೆ. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.
5. ವಿಧವೆ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಮೇಲ್ಕಂಡಂತೆ ನಿಗದಿಪಡಿಸಿದ ವಯೋಮಿತಿಗೆ 10 ವರ್ಷ ಸೇರಿಸಿ ಪರಿಗಣಿಸಲಾಗುವುದು.

5. **ಅರ್ಜಿ ಶುಲ್ಕ :**

(1) ಸಾಮಾನ್ಯ ಹಾಗೂ ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ ರೂ.1200/-

(2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಪ್ರವರ್ಗ-1 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೂ.600/-

6. **ಅರ್ಜಿ ಸಲ್ಲಿಸುವ ವಿಧಾನ :**

(1) ಬ್ಯಾಂಕಿನ ವೆಬ್‌ಸೈಟ್ ಮೂಲಕ ಪ್ರಚುರಪಡಿಸಿದ ಲಿಂಕ್‌ನಲ್ಲಿ ಮಾತ್ರ Online ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

(2) ಅರ್ಜಿಗಳನ್ನು ಸಲ್ಲಿಸುವಾಗ ಆಯಾ ಹುದ್ದೆಗಳ ಅರ್ಜಿಗಳನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.

(3) ಅರ್ಜಿಗಳನ್ನು Online ನಲ್ಲಿ ದಿ:26-08-2026 ರಿಂದ 15-09-2026 ರವರೆಗೆ ಸಾಯಂಕಾಲ 5-30 ಘಂಟೆವರೆಗೆ ಅವಕಾಶವಿರುವುದು.

(4) ಅರ್ಜಿಯಲ್ಲಿರುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು.

(5) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರಿಜ್ಞಾನ ಕಡ್ಡಾಯವಾಗಿರುತ್ತದೆ.

(6) ವಾಹನ ಚಾಲಕರಿಗೆ ಪ್ರಾವಿಣ್ಯತೆ ಪರೀಕ್ಷೆ ಹಾಗೂ ಸಂದರ್ಶನ ಜರುಗಿಸಲಾಗುವುದು.

ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ ನಿ. ಆಡಳಿತ ಕಚೇರಿ ವಿಜಯಪುರ.

7. **ಆಯ್ಕೆ ವಿಧಾನ :** ಮೇಲಿನ ವಿವಿಧ ದರ್ಜೆಯ ಹುದ್ದೆಗಳಿಗೆ (ಅಟೆಂಡರ್/ನಾಯಕ/ಸಿಪಾಯಿ/ರಾತ್ರಿ ಕಾವಲುಗಾರ ಹಾಗೂ ವಾಹನ ಚಾಲಕ) ಇವರುಗಳಿಗೆ ಹೊರತುಪಡಿಸಿ ವಿವಿಧ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ ಲಿಖಿತ ಪರೀಕ್ಷೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲ ಗಳಿಸಿದ ಅಂಕಗಳನ್ನು ಶೇ.85 ಕ್ಕೆ ಇಳಿಸಿ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು.

ಲಿಖಿತ ಪರೀಕ್ಷೆಯನ್ನು ಈ ಕೆಳಕಂಡ ವಿಷಯದ ಮೇಲೆ ನಡೆಸಲಾಗುವುದು.

| ಅ.ನಂ. | ವಿಷಯ | ಅಂಕಗಳು | ಅ.ನಂ. | ವಿಷಯ | ಅಂಕಗಳು |
|---|---|---|---|---|---|
| 1. | ಕನ್ನಡ ಭಾಷೆ | 50 | 2. | ಇಂಗ್ಲೀಷ ಭಾಷೆ | 25 |
| 3. | ಸಾಮಾನ್ಯ ಜ್ಞಾನ | 25 | 4. | ಸಹಕಾರ | 50 |
| 5. | ಬ್ಯಾಂಕಿಂಗ್ | 25 | 6. | ಭಾರತದ ಸಂವಿಧಾನ | 25 |
| | | | | ಒಟ್ಟು | 200 |

ನಾಯಕ/ಅಟೆಂಡರ್/ಸಿಪಾಯಿ/ರಾತ್ರಿ ಕಾವಲುಗಾರ ಹಾಗೂ ವಾಹನ ಚಾಲಕ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ (ಎಸ್.ಎಸ್.ಎಲ್.ಸಿ./ಸಿ.ಬಿ.ಎಸ್.ಸಿ.) ಬೋರ್ಡನ ಫಲಿತಾಂಶದ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕ ಕರೆಯಲಾಗುವುದು. ಸಂದರ್ಶನದ ದಿನಾಂಕ, ಸ್ಥಳ ಮತ್ತು ಸಮಯ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

8. ಅಭ್ಯರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ Online ನಲ್ಲಿ ಅರ್ಜಿಯೊಂದಿಗೆ ಅಪಲೋಡ್ ಮಾಡತಕ್ಕದ್ದು.

(1) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

(2) ವಯಸ್ಸು ದೃಡೀಕರಣ ಕುರಿತು ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ವರ್ಗಾವಣೆ ಪ್ರಮಾಣ ಪತ್ರ.

(3) ವಿದ್ಯಾರ್ಹತೆ ಕುರಿತು ಪ್ರಮಾಣ ಪತ್ರ

(4) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮತ್ತು ಪ್ರವರ್ಗ-1, ಹಿಂದುಳಿದ ವರ್ಗದ ಹಾಗೂ ಇನ್ನಿತರ ಮೀಸಲಾತಿ ಸೌಲಭ್ಯ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರಕಾರದ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದವರಿಂದ ದೃಡಿಕರಣ ಪಡೆದ ಪ್ರಮಾಣ ಪತ್ರ

(5) ಪ್ರವರ್ಗ 2ಎ ಹಾಗೂ 2ಬಿ ಅಭ್ಯರ್ಥಿಗಳು ನಮೂನೆ ಎಫ್ ನಲ್ಲಿ ಸಂಬಂಧಿಸಿದ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಹಾಗೂ ಬ್ಯಾಂಕು ಕೇಳಿದಾಗ ಮೂಲ ಪ್ರಮಾಣ ಪತ್ರವನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

ಆಡಳಿತ ಕಚೇರಿ
ವಿಜಯಪುರ.

## 9. ಇತರೆ ನಿಯಮಗಳು :

1) ಪೂರ್ಣ ವಿವಿರಗಳನ್ನು ಹೊಂದದೆ ಇರುವ ಹಾಗೂ ಅವಶ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಇರುವ ಹಾಗೂ ಅವಧಿ ಮೀರಿ ಅಪ್‌ಲೋಡ್ ಮತ್ತು ಟಪಾಲ್ ಮೂಲಕ ಬ್ಯಾಂಕಿಗೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಲಾಗುವುದು.

2) ಅಭ್ಯರ್ಥಿಗಳ ಆಯ್ಕೆ, ಅರ್ಜಿ ಸ್ವಿಕರಿಸುವ ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

3) ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಮೂಂದುಡುವ, ರದ್ದುಪಡಿಸುವ, ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.

4) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ (Probationary Period) ಇರಬೇಕಾಗುವುದು. ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲ್ಪಟ್ಟಂತೆ ಭದ್ರತೆ ನೀಡಬೇಕು.

5) ನೇಮಕಾತಿಗೆ ಸಂಭಂದಿಸಿದಂತೆ ಬ್ಯಾಂಕಿನೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ಮಾಡಲು ಆಸ್ಪದವಿರುವುದಿಲ್ಲ.

6) ಅರ್ಜಿಗಳನ್ನು ಅಂಚೆ/ಕೋರಿಯರ್/ಇ-ಮೇಲ್/ಖುದ್ದಾಗಿ/ಇತ್ಯಾದಿಗಳ ಮುಖಾಂತರ ಸಲ್ಲಿಸಲು ಅವಕಾಶವಿರುವುದಿಲ್ಲ. Online ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

ಸಹಿ/-

ಸಂಚಾಲಕ ಸದಸ್ಯರು ಹಾಗೂ

ಪ್ರಧಾನ ವ್ಯವಸ್ಥಾಪಕರು

ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ್ ನಿ. ವಿಜಯಪುರ.

ದಿನಾಂಕ: 26-08-2026

ಪ್ರಧಾನ ವ್ಯವಸ್ಥಾಪಕರು

ಶ್ರೀ ಸಿದ್ಧೇಶ್ವರ ಸಹಕಾರ ಬ್ಯಾಂಕ್ ನಿ., ವಿಜಯಪುರ

ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ್ ನಿ. ಆಡಳಿತ ಕಚೇರಿ ವಿಜಯಪುರ.